ಸೂಟ್‌ಕೇಸನ್ನು ತೆಗೆದುಕೊಂಡ. ಅವಳು ಬುಟ್ಟಿ ಹಿಡಿದುಕೊಂಡಳು.

ಸೂರಿ ಹುಡುಗಿಯೊಂದಿಗೆ ಹೊರಬಂದ. ಊರಲ್ಲಿನ ವಾಹನವೆಂದರೆ ಕುದುರೆಗಾಡಿಗಳಷ್ಟೇ. ಒಂದೆರಡು ಜಟಕಾ, ಟಾಂಗಾಗಳು. ಅವುಗಳಲ್ಲಿ ಒಂದು, ಸುತ್ತ ಫಳಫಳ ಹೊಳೆಯುವ ಹಿತ್ತಾಳೆ ತಗಡು ಬಡಿದು, ಒಳಗೆ ಸಾಲು ಕನ್ನಡಿ, ಕೆಂಪನೆಯ ಕ್ಯಾನ್‌ವಾಸ್ ಹೊದಿಸಿದ ಮೆತ್ತೆಯುಳ್ಳ ಬಿಳಿಕುದುರೆ 'ಷಾ ಪಸಂದ್' ರಾಜರ ಮೆಚ್ಚಿನ ಗಾಡಿ. ಅದರ ಬಾಡಿಗೆ ಉಳಿದವಕ್ಕಿಂತ ಎರಡು ಮೂರು ಪಟ್ಟುಜಾಸ್ತಿ. ಸಾಧಾರಣವಾಗಿ ಅದು ಸೂರಿಗೇ, ಅಂದರೆ ಸೂರಿಯ ಪಾರ್ಟಿಗಳಿಗೆ ಮೀಸಲು. ಸೂರಿ ಐನಾತಿ ಪಾರ್ಟಿಗಳನ್ನೇ ಆಯ್ದು, ಒಳ್ಳೆಯ ಬಾಡಿಗೆ ಕೊಡಿಸುತ್ತಿದ್ದ. ಸೂರಿ ತನಗೆ ಬೇಕೆಂದರೆ ಯಾರು ಏನೇ ಮಾಡಲಿ ಅದು ಇನ್ನೊಬ್ಬರಿಗೆ ಸಿಗುತ್ತಿರಲಿಲ್ಲ.

ಸೂರಿ ದೂರದಿಂದಲೇ ಬೆರಳ ಸನ್ನೆ ಮಾಡಿ ರಾಜಾ ಗಾಡಿಯನ್ನು ಕರೆದ. ಮಾಲೀಕ ಷರೀಫ್ ಕುದುರೆಯ ಮುಂದೆ ಹರಡಿದ್ದ ಎಳೆ ಹುಲ್ಲನ್ನು ಬಾಚಿ ಎತ್ತಿ, ತನ್ನ ಸೀಟಿನ ಕೆಳಗಿನ ಡಬ್ಬಕ್ಕೆ ತುಂಬಿ, 'ಚಲ್, ಚಲ್' ಅನ್ನುತ್ತ ಇವರ ಮುಂದೆ ಗಾಡಿಯನ್ನು ತಂದು ನಿಲ್ಲಿಸಿ, ಸೂರಿಗೆ ಸಲಾಮು ಮಾಡಿದ. ಹುಡುಗಿ ಬೆರಗಾದಳು. 'ಇದೇನು, ನಿನ್ನ ಗಾಡಿಯೇ?' ಎಂದು ಕೇಳಿದಳು. ಹೌದು, ಅಲ್ಲ ಅನ್ನದೆ, ಬಿಮ್ಮನೆ ನಸುನಗುತ್ತ 'ಹತ್ತು' ಅಂದ ಸೂರಿ ಸಾಧಾರಣವಾಗಿ ಪಾರ್ಟಿಯನ್ನು ಮುಂದೆ ಕೂರಿಸಿ, ತಾನು ಷರೀಫನ ಪಕ್ಕ ಹಿಂದಿನ ಸೀಟಿನಲ್ಲಿ ಕೂರಬೇಕು. ಇವತ್ತು ಬೇರೆ ಯಾರೂ ಇಲ್ಲದ್ದರಿಂದ ಅವಳ ಬದಿಯೇ ಕೂತ. ಗಾಡಿ ಜಬರ್ಾಗಿ ಹೊರಟಿತು.

ಹುಡುಗಿ ಸಂಕೋಚದಿಂದಲೇ ಮಾತಿಗೆ ಶುರುಮಾಡಿದಳು. 'ನಿಮ್ಮ ಗಾಡಿ ಬಹಳ ಚೆನ್ನಾಗಿದೆ, ನನಗೆ ತುಂಬ ಇಷ್ಟವಾಯಿತು' ಅಂದಳು. ಸೂರಿ 'ಥ್ಯಾಂಕ್ಸ್' ಅಂದ. 'ಇಂಥ ಬಿಳೀ ಕುದುರೆ ನಮ್ಮಲ್ಲಿ ಕಾಣುವುದೇ ಕಷ್ಟ?' ಅಂದಳು. ಸೂರಿ 'ಇದು ಸುಲ್ತಾನರ ಕಾಲದ ತುರ್ಕಿಯ ತಳಿ. ಬೇಕಾದರೆ ಕೊಡುತ್ತೇನೆ, ಬುಟ್ಟಿಯಲ್ಲಿಟ್ಟುಕೊಂಡು ನಿಮ್ಮೂರಿಗೆ ತೊಗೊಂಡು ಹೋಗು' ಅಂದ. ಇವನ ಜೋಕಿಗೆ ಅವಳು ಗೊಳ್ಳನೆ ನಕ್ಕಳು, ಅವನೂ ನಕ್ಕ. ನಡುವಿನ ಚಳಿ ಕರಗಿತು. ಈಗ ಅವಳು ತನ್ನ ದೇಶ, ತನ್ನೂರು, ಈ ದೇಶ ನೋಡಲು ತಂದೆತಾಯಿಗಳೊಡನೆ ಬಂದಿರುವ ವಿಷಯ, ತಂದೆಗೆ ಅನಾರೋಗ್ಯವಾಗಿ ಅವರು ಬೊಂಬಾಯಿಯಲ್ಲೇ ಉಳಿದು ವಿಶ್ರಮಿಸಿಕೊಳ್ಳುತ್ತಿರುವುದು, ತಾನು ಓದಿದ ಕಾಲೇಜು, ಕಾಲೇಜಿನಲ್ಲಿ ನಾಟಕವಾಡುತ್ತಿದ್ದದ್ದು, ಯಾವುದಾದರೂ ಟ್ರೂಪಿನಲ್ಲಿ ನಟಿಯಾಗಿ ಸೇರಿಕೊಳ್ಳುವ ಆಸೆ – ಎಲ್ಲವನ್ನೂ ಕುರಿತು ಹರಟಿದಳು. ಸೂರಿಗೆ ತನ್ನದಾಗಿ ಹೇಳಿಕೊಳ್ಳುವುದು ಏನೂ ಇರಲಿಲ್ಲ. ಅವಳು ಏನನ್ನೇ ಹೇಳಿದರೂ ವೇದಾಂತಿಯಂತೆ 'ಅದೇನೂ ಮುಖ್ಯವಲ್ಲ' ಎಂದು ಮಾತು ಹಾರಿಸಿ, ಮತ್ತೆ ಮತ್ತೆ ಶತಮಾನಗಳ ಹಿಂದಿನ ಊರಿನ ಇತಿಹಾಸಕ್ಕೇ ಮರುಳಿತ್ತಿದ್ದ. ಆದ ಯುದ್ಧಗಳು, ನಮ್ಮವರ ಒಳಜಗಳಗಳು, ಮೀರ್‌ಸಾದಕನ ಮೋಸ, ಪೂರ್ಣಯ್ಯನ ಚಾಕಚಕ್ಯತೆ, ಬ್ರಿಟಿಷರ ಶಿಸ್ತು, ಧೈರ್ಯ, ಶೌರ್ಯ, ಪ್ರತಾಪ ಇತ್ಯಾದಿ. ನಿಧಾನವಾಗಿ ಮಾತನಾಡುವ ಅವಳು ಒಂದೇ ಉಸಿರಿಗೆ ಒದರುತ್ತಿದ್ದ ಇವನ ವಾಗ್ಝರಿಗೆ ದಂಗಾಗಿ 'ನೀನು ಓದಿದ್ದೆಲ್ಲಿ, ಆಕ್ಸ್‌ಫರ್ಡೆ?' ಅಂದಳು. ಅವನು ಆ ಪದ ಕೇಳಿರಲಿಲ್ಲ. ಆಕ್ಸ್‌ಫರ್ಡ್, ಫೋರ್ಡ್ ಮೋಟರ್ ವಿಷಯ ಗೊತ್ತಿತ್ತು. ಇಲ್ಲ ತನ್ನಲ್ಲಿ ಫೋರ್ಡ್ ಇಲ್ಲ, ಷಾ ಪಸಂದ್ ಮಾತ್ರ ಅನ್ನಲು ಹೊರಟವನು ತನ್ನ ಯೋಗ್ಯತೆ ಬಯಲಾಗುವುದೆಂದು ಹೆದರಿ ಸುಮ್ಮನಾದ. ಅವಳು 'ಹಾಗಾದ ಕೇಂಬ್ರಿಡ್ಜ್ ಇರಬೇಕು' ಅಂದಳು. 'ಇಲ್ಲ, ಬ್ರಿಡ್ಜ್ ಆಡುವುದಿಲ್ಲ. ಇಪ್ಪತ್ತೆಂಟು ಆಡ್ತೀನಿ' ಅಂದ. ಅದೇ ಹೊತ್ತಿಗೆ ಷರೀಫ ಚಕ್ರಕ್ಕೆ ಚಾಟಿ ತಾಗಿಸಿ ಜೋರಾಗಿ ಕಟಕಟನಾದ ಹೊರಡಿಸಿದ್ದ. ಅದರ ಶಬ್ದಕ್ಕೆ ಅವಳಿಗೆ ಸೂರಿ ಹೇಳಿದ್ದು ಕೇಳಿಸಲಿಲ್ಲ. ಅವನ ಮಾನ ಉಳಿಯಿತು.

ಗಾಡಿ ಐತಾಳನ ಹೋಟೆಲಿನ ಹತ್ತಿರ ಬಂದಾಗ ಮಧ್ಯಾಹ್ನದ ತಿಂಡಿಗೆ ಅಲ್ಲಿ ಕರಿಯುತ್ತಿದ್ದ ಈರುಳ್ಳಿ ಪಕೋಡದ ವಾಸನೆ ಇಡೀ ರಸ್ತೆಯಲ್ಲಿ ಹರಡಿತ್ತು. ಹುಡುಗಿ 'ಎಷ್ಟು ಘಮ್ಮಗಿದೆ, ಯಾತರ ವಾಸನೆ